

# ಕ್ರೀಡಾಪಟು ಆಗಿ ಜೆಕೆ

'ಐರಾವನ್' ಸಿನಿಮಾ ನಂತರ ಇದೀಗ ನಿರ್ದೇಶಕ ಎಸ್.ಕೆ. ನಾಗೇಂದ್ರ ಅರಸ್ ನಿರ್ದೇಶನದ ಹೊಸ ಸಿನಿಮಾವೊಂದರಲ್ಲಿ ಕಾಣಿಸಿಕೊಳ್ಳುತ್ತಿರುವ ನಟ ಜಯರಾಂ ಕಾರ್ತಿಕ್, ಸಿನಿಮಾ ಕ್ಷೇತ್ರದಲ್ಲಿನ ತಮ್ಮ ಆದ್ಯತೆಗಳ ಕುರಿತು ಮಾತನಾಡಿದ್ದಾರೆ.

ಏಕತಾನತೆ ತರುವಂಥ ಪಾತ್ರಗಳ ಹೊರತಾಗಿ ಬೇರೆ ಬೇರೆ ಪ್ರಕಾರದ ಪಾತ್ರಗಳಿಗೆ ಹೆಚ್ಚು ಒತ್ತು ನೀಡುತ್ತಿರುವುದಾಗಿ ಹೇಳಿಕೊಂಡಿದ್ದಾರೆ.

'ನನಗೆ ಭಿನ್ನ ಎನಿಸುವಂಥ ಪಾತ್ರಗಳನ್ನು ಒಪ್ಪಿಕೊಳ್ಳುತ್ತೇನೆ. ನನ್ನನ್ನು ನಾನು ಒಂದೇ ಪ್ರಕಾರಕ್ಕೆ ಸೀಮಿತಗೊಳ್ಳದಿರುವಂತೆ ಪ್ರಯತ್ನಪಡುತ್ತೇನೆ. ಕೊನೆಗೆ ನಾನು ಪರ್ಫಾರ್ಮರ್ ಎಂದು ಕರೆಸಿಕೊಳ್ಳಬೇಕು. ಇದಕ್ಕೆ ಅನುವು ಮಾಡಿಕೊಡುವ ಕ್ರಿಯಾಶೀಲ ತಂಡದೊಂದಿಗೆ ಕೆಲಸ ಮಾಡುವ ಅವಕಾಶವನ್ನು ನಾನು ಯಾವುದೇ ಕಾರಣಕ್ಕೂ ಮಿಸ್ ಮಾಡಿಕೊಳ್ಳುವುದಿಲ್ಲ' ಎಂದು ಹೇಳಿದ್ದಾರೆ.

'ನನ್ನ ಕೆರಿಯರ್‌ನಲ್ಲಿ ಹಲವು ಕಷ್ಟದ ಹಂತಗಳನ್ನು ದಾಟಿಕೊಂಡು ಬಂದಿದ್ದೇನೆ. ಅದರ ಹೊರತಾಗಿಯೂ ನನಗೆ ನಾನೇ ಹಾಕಿಕೊಂಡ ಗುರಿ ಸಾಧಿಸಲು ಪ್ಯಾಷನ್‌ನಿಂದ ಮುಂದಡಿಯಿಡುತ್ತೇನೆ' ಎಂದಿದ್ದಾರೆ.

ಸದ್ಯ ತಾವು ನಟಿಸುತ್ತಿರುವ ಹೊಸ ಸಿನಿಮಾ ಕುರಿತು ಮಾತನಾಡಿದ ಕಾರ್ತಿಕ್, 'ಕಳೆದ ನಾಲ್ಕು ವರ್ಷಗಳಿಂದ ಈ ಪ್ರಾಜೆಕ್ಟ್ ಕೆಲಸ ನಡೆಯುತ್ತಿದೆ. ಹೊಸ ಕ್ರೀಡಾತಾರೆಯರಿಗಿರುವ ಸವಾಲಿನ ಕುರಿತ ಕಥೆ ಹೊಂದಿರುವ ಸಿನಿಮಾ ಇದು. ಕಮರ್ಷಿಯಲ್ ಅಂಶಗಳು ಹಾಗೂ ಪ್ರೇರಣೆ ತುಂಬುವಂಥ ಮಾತುಗಳನ್ನು ಒಳಗೊಂಡ ಸಿನಿಮಾ. ಸುಮ್ಮನೆ ಮಾತಷ್ಟೇ ಅಲ್ಲದೆ ಸಾಮಾಜಿಕ ಸಂದೇಶವನ್ನು ಸಿನಿಮಾ ನೀಡಲಿದೆ' ಎಂದು ವಿವರಿಸಿದ್ದಾರೆ.

ಸದ್ಯ, ಸಿನಿಮಾ ಪಾತ್ರಕ್ಕೆ ತಕ್ಕಂತೆ ದೇಹವನ್ನು ಹುರಿಗೊಳಿಸುತ್ತಿದ್ದಾರೆ. ಕ್ರೀಡಾಪಟು ಪಾತ್ರವಾದ್ದರಿಂದ ಹೆಚ್ಚೇ ದೇಹದಂಡನೆಯಲ್ಲಿ ತೊಡಗಿದ್ದಾರೆ. ■



# ಬೃಂದಾ ಪಥದಲ್ಲಿ...

'ಕೌಸಲ್ಯಾ ಸುಪ್ರಜಾ ರಾಮ' ಸಿನಿಮಾ ಮೂಲಕ ಕನ್ನಡ ಪ್ರೇಕ್ಷಕರ ಮನ ಗೆದ್ದಿರುವ ನಟಿ ಬೃಂದಾ ಆಚಾರ್ಯ ಅವರ ಮುಂದೆ ಇನ್ನಷ್ಟು ಸಿನಿಮಾಗಳು ಸರತಿ ಸಾಲಿನಲ್ಲಿವೆ.

ರಿಯಲಿಸ್ಟಿಕ್ ಪಾತ್ರಗಳತ್ತ ಎಂದಿಗೂ ತಮ್ಮ ಆದ್ಯತೆ ಇದ್ದೇ ಇದೆ ಎನ್ನುವ ಹೊನ್ನಾವರ ಮೂಲದ ನಟಿ ಬೃಂದಾ ಅಭಿನಯದ ಚಿತ್ರ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಸಿನಿಮಾದ ಒಂದು ಭಾಗದ ಚಿತ್ರೀಕರಣ ಸದ್ಯ ಪೂರ್ಣಗೊಂಡಿದೆ. ಜೊತೆಗೆ 'ರೀತು' ಎಂಬ ಮಹಿಳಾ ಪ್ರಧಾನ ಚಿತ್ರದಲ್ಲಿಯೂ ಪ್ರಮುಖ ಪಾತ್ರದಲ್ಲಿ ಬೃಂದಾ ಕಾಣಿಸಿಕೊಳ್ಳುತ್ತಿದ್ದಾರೆ. ಈ ವರ್ಷ ಕಳೆದು ಹೊಸ ವರ್ಷದ ಸಾಲಿನಲ್ಲಿ ಮೂರ್ನಾಲ್ಕು ಸಿನಿಮಾಗಳು ಈಗಾಗಲೇ ಅವರ ಮುಂದಿವೆ ಎನ್ನಲಾಗಿದೆ.

'ಪ್ರೇಮಂ ಪೂಜ್ಯಂ' ಮೂಲಕ ಚಿತ್ರರಂಗಕ್ಕೆ ಕಾಲಿಟ್ಟಿದ್ದ ಬೃಂದಾ ಆಚಾರ್ಯ, 'ಜೂಲಿಯೆಟ್ 2' ಸಿನಿಮಾದಲ್ಲಿ ನಟಿಸಿದ್ದರು. ಅವರ ಮೂರನೇ ಸಿನಿಮಾ 'ಕೌಸಲ್ಯಾ ಸುಪ್ರಜಾ ರಾಮ' ಮೂಲಕ ಜನ ಮೆಚ್ಚುಗೆ ಪಡೆದರು. ಆನಂತರ ಹಲವು ಅವಕಾಶಗಳು ಅವರನ್ನು ಅರಸಿ ಬರುತ್ತಿವೆ.

ಸದ್ಯ ದೀಕ್ಷಿತ್ ಶೆಟ್ಟಿ ನಟನೆಯ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಸಿನಿಮಾ ಚಿತ್ರೀಕರಣ ಸಾಗುತ್ತಿದೆ. ನಟಿ ಬೃಂದಾ, ದೀಕ್ಷಿತ್‌ಗೆ ಜೋಡಿಯಾಗಿದ್ದಾರೆ. ವರ್ಷಗಳ ಹಿಂದೆ ಈ ಚಿತ್ರದ ಪೋಸ್ಟರ್ ಸದ್ದು ಮಾಡಿತ್ತು. ಅದಾದ ಬಳಿಕ ಯಾವ ಸುದ್ದಿಯನ್ನೂ ನೀಡದ ಚಿತ್ರತಂಡ ಸದ್ದುಗದ್ದಲವಿಲ್ಲದೇ ಒಂದು ಭಾಗದ ಚಿತ್ರೀಕರಣ ಪೂರೈಸಿದೆ.

'ಬ್ಯಾಂಕ್ ದರೋಡೆಗೆ ಸಂಬಂಧಿಸಿದ ಥ್ರಿಲ್ಲರ್ ಜಾನರ್ ಸಿನಿಮಾ ಇದಾಗಿದ್ದು, ಚಿತ್ರದ ಒಂದು ಭಾಗವನ್ನು ಬೆಂಗಳೂರು ಸುತ್ತಮುತ್ತ ಚಿತ್ರೀಕರಿಸಲಾಗಿದೆ. ಒಟ್ಟು 60 ದಿನಗಳ ಕಾಲ ಚಿತ್ರೀಕರಣ ನಡೆಸುವ ಯೋಜನೆಯಿದ್ದು, ಶೀಘ್ರದಲ್ಲಿ ಎರಡನೇ ಹಂತದ ಚಿತ್ರೀಕರಣ ಪ್ರಾರಂಭವಾಗಲಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ. ■